ಅನಿಯಮಿತ ಲೋಡ್ ಶೆಡ್ಡಿಂಗನ್ನು ನಿರ್ವಹಿಸಬೇಕಾಗಿದೆ. ಮುಂಗಾರು ಮುಂಚಿನ ಮಳೆಯಾಗಿ ಕೃಷಿವಲಯದಲ್ಲಿ ವಿದ್ಯುತ್ ಬಳಕೆ ಪ್ರಮಾಣ ಕಡಿಮೆಯಾದಲ್ಲಿ ವಿದ್ಯುತ್ ವಿದ್ಯುಚ್ಛಕ್ತಿ ಮಂಡಳಿಯಿಂದ ವಿದ್ಯುತ್ ಸರಬರಾಜಿನ ಪರಿಸ್ಥಿತಿಯಲ್ಲಿ ಸ್ವಲ್ಪ ಸುಧಾರಣೆ ಉಂಟಾಗುತ್ತದೆ.

ಕೊಳವೆ ಬಾವಿಗಳಿಗೆ ವಿದ್ಯುತ್ ಸೌಕರ್ಯ

1845 - ಶ್ರೀ ಸಿ.ಆರ್. ಸಗೀರ್ ಅಹಮದ್ (ಚಿಕ್ಕಮಗಳೂರು) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿ ವಿವಿಧ ಯೋಜನೆಗಳಲ್ಲಿ ಕೊಳವೆ ಬಾವಿಗಳಿಗೆ ವಿದ್ಯುಚ್ಛಕ್ತಿ ಒದಗಿಸಲು ಕೋರಿ ಬಂದಿರುವ ಅರ್ಜಿಗಳೆಷ್ಟು? (ಜಿಲ್ಲಾವಾರು ಮಾಹಿತಿ ನೀಡುವುದು)*

ಆ) *ಅವುಗಳಲ್ಲಿ ಎಷ್ಟು ಕೊಳವೆ ಬಾವಿಗಳಿಗೆ ವಿದ್ಯುಚ್ಛಕ್ತಿಯನ್ನು ಸರ್ಕಾರದವರು ಒದಗಿಸಿದ್ದಾರೆ?*

ಇ) *ಉಳಿದ ಬಾವಿಗಳಿಗೆ ವಿದ್ಯುಚ್ಛಕ್ತಿ ಒದಗಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?*

ಶ್ರೀ ಶರಣಬಸಪ್ಪ ದರ್ಶನಾಪುರ (ಇಂಧನ ರಾಜ್ಯ ಸಚಿವರು) :

ಅ) ರಾಜ್ಯದಲ್ಲಿ ಕೊಳವೆ ಬಾವಿಗಳಿಗೆ ವಿದ್ಯುಚ್ಛಕ್ತಿ ಒದಗಿಸಲು 31-3-97ರ ಅಂತ್ಯದವರೆಗೆ 103712 ಅರ್ಜಿಗಳು ಬಾಕಿಯಿದ್ದು, 1997-98 ಸಾಲಿನಲ್ಲಿ 31-1-97ರ ಅಂತ್ಯದವರೆಗೆ ಒಟ್ಟು 38942 ಅರ್ಜಿಗಳು ಹೊಸದಾಗಿ ನೊಂದಾಯಿಸಲ್ಪಟ್ಟವು. ಹಾಗೂ ಹಿಂದಿನ 19073 ವಿವಿಧ ಕಾರಣಗಳಿಂದ ತಪ್ಪಿಹೋಗಿದ್ದು (ಲ್ಯಾಪ್ಸ್ ಆಗಿದ್ದು), 18795 ಕೊಳವೆ ಬಾವಿಗಳಿಗೆ ವಿದ್ಯುತ್ ಸಂಪರ್ಕ ನೀಡಲಾಯಿತು. 31-1-98 ರ ಅಂತ್ಯಕ್ಕೆ 104876 ಅರ್ಜಿಗಳು ಬಾಕಿ ಇರುತ್ತದೆ. ಅವುಗಳ ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ಕೊಡಲಾಗಿದೆ.

ಆ) 1997-98ರ ಸಾಲಿನಲ್ಲಿ ಜನವರಿ ಅಂತ್ಯದವರೆಗೆ ಒಟ್ಟು 18795 ಕೊಳವೆ ಬಾವಿಗಳಿಗೆ ವಿದ್ಯುತ್ ಸಂಪರ್ಕ ನೀಡಲಾಗಿದೆ.

ಇ) ಬಾಕಿ ಉಳಿದಿರುವ ಅರ್ಜಿಗಳಿಗೆ ಮಂಡಳಿಯು ಸಿದ್ಧಪಡಿಸಿರುವ ಆದ್ಯತಾ ಪಟ್ಟಿಯಲ್ಲಿ ಜೇಷ್ಠತೆಗೆ ಅನುಗುಣವಾಗಿ ವಿದ್ಯುತ್ ಸಂಪರ್ಕವನ್ನು ಒದಗಿಸಲಾಗುವುದು.

ಅನುಬಂಧ

1997-98 ಜನವರಿ ತಿಂಗಳ ಅಂತ್ಯದಲ್ಲಿ ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುತ್ ಸಂಪರ್ಕ ನೀಡಲು ಬಾಕಿಯಿರುವ ಅರ್ಜಿಗಳ ಜಿಲ್ಲಾವಾರು ವಿವರಗಳು :

ಕ್ರ. ಸಂ.	ಜಿಲ್ಲೆಗಳು	31.3.98ರ ಅಂತ್ಯಕ್ಕೆ ಬಾಕಿ ಇದ್ದ ಅರ್ಜಿಗಳು	1997-98 ರಲ್ಲಿ ಹೊಸದಾಗಿ ನೊಂದಾಯಿಸಲ್ಪಟ್ಟವು	1997-98 ರಲ್ಲಿ ಸಂಪರ್ಕ ನೀಡಿದ ಸಂಖ್ಯೆ	31-1-98ರ ಅಂತ್ಯಕ್ಕೆ ಲ್ಯಾಪ್ಸ್ ಆದವು	ಬಾಕಿ ಉಳಿದಿರುವ ಅರ್ಜಿಗಳು
01.	ಬೆಂಗಳೂರು	4621	86	1680	458	2569
02.	ಬೆಳಗಾಂ	6699	3906	1053	-	9552
03.	ಬಳ್ಳಾರಿ	2726	1438	628	288	3248
04.	ಬೀದರ್	2530	833	215	374	2774
05.	ಬಿಜಾಪುರ	9900	4082	1683	2872	9427
06.	ಚಿಕ್ಕಮಗಳೂರು	5493	1945	1329	1006	5103
07.	ಚಿತ್ರದುರ್ಗ	11757	1470	867	1205	11155
08.	ಕೊಡಗು	131	80	20	33	158
09.	ಧಾರವಾಡ	6047	2462	1153	1175	6180
10.	ಗುಲ್ಬರ್ಗ	3013	1059	296	675	3103
11.	ಹಾಸನ	8821	2418	676	1238	9325
12.	ಕೋಲಾರ	6862	2448	1455	860	6995
13.	ಮಂಡ್ಯ	4333	2556	837	1537	4515
14.	ಮೈಸೂರು	5012	1721	2152	1539	3042
15.	ಉತ್ತರ ಕನ್ನಡ	2473	830	512	117	2674
16.	ರಾಯಚೂರು	6224	4601	1107	-	9718
17.	ಶಿವಮೊಗ್ಗ	4576	1792	669	853	4846
18.	ದಕ್ಷಿಣ ಕನ್ನಡ	6382	1637	1257	530	6232
19.	ತುಮಕೂರು	6113	3578	1206	1524	6961
	ಒಟ್ಟು	**103712**	**38942**	**18795**	**19073**	**104786**